# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 195
ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 28.01.2026

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಿಗೆ ಸಂಸ್ಥೆಗಳು ಎಷ್ಟು; ಸದರಿ ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ನೌಕರರ ಸಂಖ್ಯೆ ಎಷ್ಟು; ಸದರಿ ನೌಕರರಿಗೆ ಯಾವ ವರ್ಷದಲ್ಲಿ ವೇತನ ಪರಿಷ್ಕರಣೆ ಮಾಡಲಾಗಿದೆ; ಯಾವ ನಿಯಮಗಳಡಿ ವೇತನ ಪರಿಷ್ಕರಣೆ ಮಾಡಲಾಗುತ್ತದೆ: (ಸಂಪೂರ್ಣ ಮಾಹಿತಿ ನೀಡುವುದು) | ಸಾರಿಗೆ ಇಲಾಖೆಯಡಿ ಈ ಕೆಳಕಂಡ 04 ಸಾರಿಗೆ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ:<br>1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ;<br>2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ;<br>3. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ;<br>4. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ.<br><br>ಸದರಿ 04 ಸಾರಿಗೆ ಸಂಸ್ಥೆಗಳಲ್ಲಿ ಡಿಸೆಂಬರ್-2025ರ ಅಂತ್ಯಕ್ಕೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವೃಂದವಾರು ವಿವರ ಈ ಕೆಳಕಂಡಂತಿದೆ :- |

| ಸಂಸ್ಥೆ/ ನಿಗಮ | ವೃಂದ | | | | ಒಟ್ಟು |
|---|---|---|---|---|---|
| | ಎ | ಬಿ | ಸಿ | ಡಿ | |
| **ಕ.ರಾ.ರ.ಸಾ.ನಿಗಮ** | 141 | 144 | 33444 | 507 | **34236** |
| **ಬೆಂ.ಮ.ಸಾ.ಸಂಸ್ಥೆ** | 63 | 63 | 29052 | 99 | **29277** |
| **ವಾ.ಕ.ರ.ಸಾ.ಸಂಸ್ಥೆ** | 73 | 83 | 20708 | 292 | **21156** |
| **ಕ.ಕ.ರ.ಸಾ.ನಿಗಮ** | 81 | 82 | 18835 | 296 | **19294** |
| **ಒಟ್ಟು** | **358** | **372** | **102039** | **1194** | **103963** |

ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ. ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರಿಗೆ ಕೈಗಾರಿಕಾ ಒಪ್ಪಂದದನ್ವಯ ನಾಲ್ಕು ವರ್ಷಗಳಿಗೊಮ್ಮೆ ವೇತನವನ್ನು ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದ್ದು, ನಿಗಮಗಳ ಆರ್ಥಿಕ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರದ ಅನುಮೋದನೆ ಪಡೆದು ವೇತನ ಪರಿಷ್ಕರಣೆಯನ್ನು ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ.

ಅದರಂತೆ 2016ರಲ್ಲಿ ವೇತನ ಪರಿಷ್ಕರಣೆಯಾಗಿದ್ದು, ತದನಂತರ 2020ನೇ ವರ್ಷದಲ್ಲಿ ವೇತನ ಪರಿಷ್ಕರಣೆ ಮಾಡಬೇಕಾಗಿತ್ತು. ಆದರೆ, ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:17.03.2023ರಲ್ಲಿ ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ ಸೆಕ್ಷನ್ 34(1)ರನ್ವಯ ದಿನಾಂಕ:01.03.2023 ರಿಂದ ಜಾರಿಗೆ

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಬರುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮತ್ತು ಪೂರ್ವ ಕಿಂಕೋ ಅಧಿಕಾರಿಗಳು/ ನೌಕರರೂ ಸೇರಿದಂತೆ ದಿನಾಂಕ:31.12.2019 ರಂದು ಪಡೆಯುತ್ತಿದ್ದ ಮೂಲ ವೇತನವನ್ನು ಶೇ.15ರಷ್ಟು ಹೆಚ್ಚಿಸಿ, ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.03.2023ರಿಂದ ಜಾರಿಗೊಳಿಸಲಾಗಿದೆ. |
| ಆ. | ಸದರಿ ಸಾರಿಗೆ ಸಂಸ್ಥೆಗಳಲ್ಲಿ ಸಾರ್ವಜನಿಕರ ಸೇವೆಗಾಗಿ ಲಭ್ಯವಿರುವ ಬಸ್‌ಗಳ ಸಂಖ್ಯೆ ಎಷ್ಟು; ಕಳೆದ 3 ವರ್ಷಗಳಲ್ಲಿ ಎಷ್ಟು ನೂತನ ಬಸ್‌ಗಳನ್ನು ಯಾವ ಯಾವ ಸಾರಿಗೆ ಸಂಸ್ಥೆಗಳಿಗೆ ಯಾವ ವರ್ಷದಲ್ಲಿ ನೀಡಲಾಗಿದೆ; | ಸದರಿ ಸಾರಿಗೆ ಸಂಸ್ಥೆಗಳಲ್ಲಿ ಲಭ್ಯವಿರುವ ಒಟ್ಟು ಸಾರಿಗೆ ಬಸ್ಸುಗಳ ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕಗಳನ್ನು ನೋಡಿ) |

| ಸಂಸ್ಥೆ/ ನಿಗಮ | ಬಸ್‌ಗಳ ಸಂಖ್ಯೆ |
|---|---|
| ಕ.ರಾ.ರ.ಸಾ.ನಿಗಮ | 8708 |
| ಬೆಂ.ಮ.ಸಾ.ಸಂಸ್ಥೆ | 6981 |
| ವಾ.ಕ.ರ.ಸಾ.ಸಂಸ್ಥೆ | 5186 |
| ಕ.ಕ.ರ.ಸಾ.ನಿಗಮ | 5038 |
| **ಒಟ್ಟು** | **25913** |

**ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ಬಸ್ಸುಗಳನ್ನು ಖರೀದಿಸಿರಲಿಲ್ಲ.** ಆದರೆ ಪ್ರಸ್ತುತ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮ/ ಸಂಸ್ಥೆಗಳಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ / ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:-

| ಸಂಸ್ಥೆಗಳು | 2023-24 (Jan) | 2024-25 | 2025-26 | ಒಟ್ಟು |
|---|---|---|---|---|
| ಕ.ರಾ.ರ.ಸಾ. ನಿಗಮ | 510 | 698 | 10+60* | 1278 |
| ಬೆಂ.ಮ.ಸಾ. ಸಂಸ್ಥೆ | 20 ಡೀಸೆಲ್ | 820 ಡೀಸೆಲ್ | - | 2275 |
| | 341 ಇ.ವಿ | 755 ಇ.ವಿ | 339 ಇ.ವಿ | |
| ವಾ.ಕ.ರ.ಸಾ. ಸಂಸ್ಥೆ | 296 | 560 | 11+ 354** | 1221 |
| ಕ.ಕ.ರ.ಸಾ. ನಿಗಮ | 720 | 307 | 146 | 1173 |
| **ಒಟ್ಟು** | **1887** | **3140** | **920** | **5947** |

* ಪ್ರಸಕ್ತ 2025-26ನೇ ಸಾಲಿನಲ್ಲಿ ಕ.ರಾ.ರ.ಸಾ.ನಿಗಮದ ವತಿಯಿಂದ 60 ನಾನ್ ಎ.ಸಿ. ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

**ಪ್ರಸಕ್ತ 2025-26ನೇ ಸಾಲಿನಲ್ಲಿ ವಾ.ಕ.ರ.ಸಾ.ಸಂಸ್ಥೆಗೆ 354 ಹೊಸ ಬಸ್‌ಗಳನ್ನು ಖರೀದಿಸಲು ಖರೀದಿ ಆದೇಶ ನೀಡಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಇ. | 2023-24, 2024-25 ಹಾಗೂ 2025-26ನೇ ಸಾಲಿನಲ್ಲಿ ಶಕ್ತಿ ಯೋಜನೆಯಡಿಯಲ್ಲಿ ಸಂಚರಿಸಿದ ಮಹಿಳೆಯರ ಸಂಖ್ಯೆ ಎಷ್ಟು; ಎಷ್ಟು ಮೊತ್ತದ ಟಿಕೆಟ್ ವಿತರಿಸಲಾಗಿದೆ; ವಿತರಿಸಿದ ಟಿಕೆಟ್ ಮೊತ್ತವನ್ನು ರಾಜ್ಯ ಸರ್ಕಾರವು ಸಕಾಲದಲ್ಲಿ ಪಾವತಿಸಿದೆಯೇ; ಪಾವತಿಸದೇ ಬಾಕಿ ಉಳಿಸಿಕೊಂಡ ಮೊತ್ತ ಎಷ್ಟು ಮತ್ತು ಯಾವ ಕಾಲಮಿತಿಯೊಳಗೆ ಪಾವತಿ ಮಾಡಲಾಗುವುದು ಹಾಗೂ ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ; ಯಾವ ಮೂಲದಿಂದ ಸದರಿ ಬಾಕಿ ಮೊತ್ತವನ್ನು ಸರಿಪಡಿಸಲಾಗಿದೆ; ಬಾಕಿ ಉಳಿಸಿಕೊಂಡಿರುವುದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾದಂತಾಗುವುದಲ್ಲವೇ? | ರಾಜ್ಯದ ನಾಲ್ಕು ಸಾರಿಗೆ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ 2023-24 ರಿಂದ 2025-26ನೇ ಸಾಲಿನ (ಡಿಸೆಂಬರ್-2025ರ ಅಂತ್ಯದವರೆಗೆ) ಶಕ್ತಿ ಯೋಜನೆಯಡಿ ಫಲಾನುಭವಿಗಳ ಸಂಖ್ಯೆ, ಬಿಡುಗಡೆ ಕೋರಲಾದ ಮೊತ್ತ ಬಿಡುಗಡೆಗೊಳಿಸಿದ ಅನುದಾನ ಮತ್ತು ಕೊರತೆ ಮೊತ್ತದ ವಿವರಗಳನ್ನು **<u>ಅನುಬಂಧ-ಅ</u>** ರಲ್ಲಿ ಒದಗಿಸಲಾಗಿದೆ.<br><br>ಸರ್ಕಾರದಿಂದ ಈವರೆವಿಗೂ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಸಕಾಲದಲ್ಲಿ ಮಾಹೆವಾರು ಮುಂಗಡವಾಗಿ ಬಿಡುಗಡೆಗೊಳಿಸಲಾಗುತ್ತಿದೆ.<br><br>ಕೊರತೆ ಮೊತ್ತವನ್ನು ಮರು ಪಾವತಿಸುವಂತೆ ಆರ್ಥಿಕ ಇಲಾಖೆಯನ್ನು ಹಲವಾರು ಬಾರಿ ಕೋರಲಾಗಿದ್ದು, ಈಗಾಗಲೇ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಸರ್ಕಾರದಿಂದ ಅನುದಾನವನ್ನು ಒದಗಿಸಿದ್ದು ಮತ್ತು ಶಕ್ತಿ ಯೋಜನೆಗೆ ಒಟ್ಟಾರೆ ಆರ್ಥಿಕ ಸಹಾಯವನ್ನು ಆಯವ್ಯಯದಲ್ಲಿ ಒದಗಿಸುತ್ತಿರುವುದರಿಂದ ಶಕ್ತಿ ಯೋಜನೆಗೆ ಕೊರತೆಯಾಗಿರುವ ಅನುದಾನವನ್ನು ಒದಗಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಾಗುವುದಿಲ್ಲವೆಂದು ತಿಳಿಸಿರುತ್ತದೆ.<br><br>ಮುಂದುವರೆದು, ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020 ರಿಂದ ದಿನಾಂಕ:28.02.2023 ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ/ ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತವಾದ ಒಟ್ಟು ರೂ.224.05 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಟಿಡಿ 72 ಟಿಸಿಬಿ 2024 (ಭಾ-1), ದಿನಾಂಕ:07.12.2024ರಲ್ಲಿ ನಿಗಮವಾರು ಈ ಕೆಳಕಂಡಂತೆ ಸರ್ಕಾರದ ಅನುದಾನದ ರೂಪದಲ್ಲಿ ಬಿಡುಗಡೆ ಮಾಡಲಾಗಿದೆ.<br><br>**(ರೂ.ಕೋಟಿಗಳಲ್ಲಿ)**<br><table><tr><th>ಸಂಸ್ಥೆ</th><th>ಅನುದಾನ</th></tr><tr><td>ಕ.ರಾ.ರ.ಸಾ.ನಿಗಮ</td><td>86.55</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>50.25</td></tr><tr><td>ವಾ.ಕ.ರ.ಸಾ.ಸಂಸ್ಥೆ</td><td>51.50</td></tr><tr><td>ಕ.ಕ.ರ.ಸಾ.ನಿಗಮ</td><td>35.75</td></tr><tr><td>**ಒಟ್ಟು**</td><td>**224.05**</td></tr></table><br>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ನವೆಂಬರ್-2024ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನ ಬಾಕಿ ಮೊತ್ತ ಪಾವತಿಸಲು ಸರ್ಕಾರದ ಖಾತರಿ / ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ರೂ.2000/- ಕೋಟಿ ಸಾಲ ಪಡೆದು ಈ ಕೆಳಕಂಡಂತೆ ನಿಗಮಗಳಿಗೆ ನೀಡಲಾಗಿದ್ದು, ಸದರಿ ಸಾಲದ ಮೊತ್ತವನ್ನು **ಸಂಪೂರ್ಣವಾಗಿ ಸರ್ಕಾರವೇ ಮರು ಪಾವತಿಸುತ್ತದೆ.** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

**(ರೂ. ಕೋಟಿಗಳಲ್ಲಿ)**

| ಸಂಸ್ಥೆ/ನಿಗಮ | ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 623.80 |
| ಬೆಂ.ಮ.ಸಾ.ಸಂಸ್ಥೆ | 589.20 |
| ವಾ.ಕ.ರ.ಸಾ.ಸಂಸ್ಥೆ | 646.00 |
| ಕ.ಕ.ರ.ಸಾ.ನಿಗಮ | 141.00 |
| **ಒಟ್ಟು** | **2000.00** |

2025-26ನೇ ಸಾಲಿನಲ್ಲಿ ಸದರಿ ರೂ.2000.00 ಕೋಟಿ ಸಾಲದ ಮೊತ್ತದ ಅಸಲು ಮತ್ತು ಬಡ್ಡಿ ಪಾವತಿಗಾಗಿ ನಾಲ್ಕು ಸಾರಿಗೆ ನಿಗಮಗಳಿಗೆ ಒಟ್ಟು ರೂ.452.00 ಕೋಟಿಗಳ ಅನುದಾನವನ್ನು ಸಹ ಒದಗಿಸಲಾಗಿದೆ.

ನಾಲ್ಕು ಸಾರಿಗೆ ನಿಗಮಗಳ ನಗದು ಕೊರತೆಯನ್ನು ನಿಭಾಯಿಸಲು 2023-24 ಮತ್ತು 2024-25ನೇ ಸಾಲಿನಲ್ಲಿ ನಿಗಮಗಳು ಕ್ರಮವಾಗಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.581.47 ಕೋಟಿ ಮತ್ತು ರೂ.637.76 ಕೋಟಿ ಸೇರಿದಂತೆ ಒಟ್ಟು ರೂ.1219.23 ಕೋಟಿಗಳ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

ಈ. ಸದರಿ ಸಾರಿಗೆ ಸಂಸ್ಥೆಗಳಿಂದ ಡಿಸೆಂಬರ್-2025ರ ಅಂತ್ಯದವರೆಗೆ ಭವಿಷ್ಯ ನಿಧಿ, ನಿವೃತ್ತ ನೌಕರರ ಉಪಧನ, ರಜೆ ನಗದೀಕರಣ, ಸಿಬ್ಬಂದಿಗಳಿಗೆ ಬಾಕಿ, ಇಂಧನ ಖರೀದಿ, ಪೂರೈಕೆದಾರರಿಗೆ ಪಾವತಿಸಿಬೇಕಾದ ಬಾಕಿ ಮೊತ್ತ ಸಂಸ್ಥೆಗಳ ಸಾಲದ ಹೊಣೆಗಾರಿಕೆ ಮೊತ್ತದ ಬಾಕಿ ಪಾವತಿಗಳ ಮಾಹಿತಿಯನ್ನು ನೀಡುವುದು.

ಉ. ಸದರಿ ಬಾಕಿಯನ್ನು ಪಾವತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಬಾಕಿ ಮೊತ್ತವನ್ನು ಪಾವತಿಸಲಾಗುವುದು; ಬಾಕಿ ಉಳಿಸಿಕೊಳ್ಳಲು ಸ್ಪಷ್ಟ ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

ನಾಲ್ಕು ಸಾರಿಗೆ ನಿಗಮಗಳಲ್ಲಿ ದಿನಾಂಕ:22.01.2026ರಲ್ಲಿದ್ದಂತೆ (ಸರ್ಕಾರದ ಬೆಂಬಲಿತ ಸಾಲದ ಹೊಣೆಗಾರಿಕೆ ಒಳಗೊಂಡು) ಬಾಕಿ ಪಾವತಿಯ ವಿವರಗಳು ಕೆಳಕಂಡಂತಿವೆ:-

**(ರೂ. ಕೋಟಿಗಳಲ್ಲಿ)**

| ಕ್ರ.ಸಂ. | ವಿವರ | ಕ.ರಾ.ರ.ಸಾ.ನಿಗಮ | ಬೆ.ಮ.ನ.ಸಾ.ಸಂಸ್ಥೆ | ವಾ.ಕ.ರ.ಸಾ.ಸಂಸ್ಥೆ | ಕ.ಕ.ರ.ಸಾ.ನಿಗಮ | ಒಟ್ಟು |
|---|---|---|---|---|---|---|
| 1 | ಭವಿಷ್ಯ ನಿಧಿ | 424.61 | 912.42 | 707.58 | 26.00 | **2070.61** |
| 2 | ನಿವೃತ್ತ ನೌಕರರ ಉಪಧನ ಹಾಗೂ ರಜೆ ನಗದೀಕರಣ | 9.14 | 185.28 | 85.98 | 59.00 | **339.40** |
| 4 | ಸಿಬ್ಬಂದಿಗಳ ಬಾಕಿ | 73.48 | 148.97 | 43.09 | 35.88 | **301.42** |
| 5 | ಇಂಧನ ಸರಬರಾಜುದಾರರ ಬಾಕಿ | 274.81 | 393.29 | 147.25 | 118.21 | **933.56** |
| 6 | ಸರಬರಾಜುದಾರರ ಬಾಕಿ | 23.38 | 252.83 | 8.93 | 13.75 | **298.89** |
| 7 | ಅಪಘಾತ ಪರಿಹಾರ ಪ್ರಕರಣಗಳು | 48.41 | 21.48 | 64.50 | 24.40 | **158.79** |
| 8 | ಇತರೆ | 44.58 | 275.30 | 61.49 | 0 | **381.37** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

| | | | | | | |
|---|---|---|---|---|---|---|
| 9 | ಮೋಟಾರು ವಾಹನ ತೆರಿಗೆ | - | - | - | 170.49 | **170.49** |
| 9 | ಸಾಲದ ಬಾಕಿ ಹೊಣೆಗಾರಿಕೆ | 800.71 | 871.26 | 644.51 | 265.53 | **2582.01** |
| | **ಒಟ್ಟು** | **1699.12** | **3060.83** | **1763.33** | **713.26** | **7236.54** |

**ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಮೇ 2023ರವರೆಗೆ ಒಟ್ಟು ರೂ.4099.38 ಕೋಟಿಗಳ ಹೊಣೆಗಾರಿಕೆ ಬಾಕಿ ಇದ್ದುದ್ದರಿಂದ (ಸಾಲದ ಬಾಕಿ ಹೊಣೆಗಾರಿಕೆ ಒಳಗೊಂಡಂತೆ), ಸದರಿ ಬಾಕಿಯು ನಿಗಮಗಳ ತೀವ್ರ ಆರ್ಥಿಕ ಹಿನ್ನೆಡೆಗೆ ಕಾರಣವಾಗಿತ್ತು. ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ಮತ್ತು ಸರಬರಾಜುದಾರರ/ ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು.**

**ಮೇ 2023 ರವರೆಗೆ ನಿಗಮವಾರು ಬಾಕಿಯಿದ್ದ ಹೊಣೆಗಾರಿಕೆಯ ವಿವರ ಕೆಳಕಂಡಂತಿದೆ:-**

**(ರೂ. ಕೋಟಿಗಳಲ್ಲಿ)**

| ನಿಗಮ/ ಸಂಸ್ಥೆ | ಬಾಕಿ ಹೊಣೆಗಾರಿಕೆ ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 1211.18 |
| ಬೆಂ.ಮ.ಸಾ.ಸಂಸ್ಥೆ | 1383.86 |
| ವಾ.ಕ.ರ.ಸಾ.ಸಂಸ್ಥೆ | 1253.01 |
| ಕ.ಕ.ರ.ಸಾ.ನಿಗಮ | 251.33 |
| **ಒಟ್ಟು** | **4099.38** |

ವರ್ಷವಾರು ಬಾಕಿ ವಿವರಗಳನ್ನು **ಅನುಬಂಧ-ಆ** ರಲ್ಲಿ ನೀಡಲಾಗಿದೆ.

ಅಲ್ಲದೇ, ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗೆ ಅಧಿಕಾರಿ/ನೌಕರರಿಗೆ ಕೈಗಾರಿಕಾ ಒಪ್ಪಂದದನ್ವಯ ನಾಲ್ಕು ವರ್ಷಗಳಿಗೊಮ್ಮೆ ಒಪ್ಪಂದವನ್ನು (ಅಗ್ರಿಮೆಂಟ್) ಪರಿಷ್ಕರಿಸಬೇಕಾಗಿರುತ್ತದೆ. ಅದರಂತೆ 2016ರಲ್ಲಿ ವೇತನ ಪರಿಷ್ಕರಣೆಯಾಗಿದ್ದು, ತದನಂತರ 2020ನೇ ವರ್ಷದಲ್ಲಿ ವೇತನ ಪರಿಷ್ಕರಣೆ ಮಾಡಬೇಕಾಗಿತ್ತು. ಆದರೆ, ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:17.03.2023ರಲ್ಲಿ ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ ಸೆಕ್ಷನ್ 34(1)ರನ್ವಯ ದಿನಾಂಕ:01.03.2023ರಿಂದ ಜಾರಿಗೆ ಬರುವಂತೆ ನಾಲ್ಕು ಸಾರಿಗೆ ನಿಗಮಗಳು ಮತ್ತು ಪೂರ್ವ ಕಿಂಕೋ ಅಧಿಕಾರಿಗಳ/ ನೌಕರರೂ ಸೇರಿದಂತೆ ದಿನಾಂಕ:31.12.2019 ರಂದು ಪಡೆಯುತ್ತಿದ್ದ ಮೂಲ ವೇತನವನ್ನು ಶೇ.15ರಷ್ಟು ಹೆಚ್ಚಿಸಿ, ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.03.2023ರಿಂದ ಜಾರಿಗೊಳಿಸಲಾಗಿತ್ತು. **ಆದರೆ, ಸದರಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅಧಿಕಾರಿ/ನೌಕರರಿಗೆ ವೇತನವನ್ನು ಪಾವತಿಸಲು ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಮೀಸಲಿರಿಸಿರಲಿಲ್ಲ ಹಾಗೂ ನಿಗಮಗಳಿಗೆ**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | **ಅನುದಾನ ಬಿಡುಗಡೆ ಮಾಡಿರಲಿಲ್ಲ. ಇದರಿಂದ, ನಿಗಮಗಳು ತೀವ್ರ ಒತ್ತಡಕ್ಕೆ ಸಿಲುಕಿದ್ದವು.**<br><br>ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುವುದು ಸಹ ನಿಗಮಗಳ ಆರ್ಥಿಕ ಸ್ಥಿತಿಗೆ ಕಾರಣವಾಗಿರುತ್ತವೆ.<br><br>2023ರ ಮೇ ತಿಂಗಳ ನಂತರ ದಿನನಿತ್ಯ ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿಗಳ ವೇತನ ಹೆಚ್ಚಳ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿ ನಿಗಮಗಳಿಗೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗಿದೆ.<br><br>ನಿಗಮಗಳ ಬಾಕಿ ಹೊಣೆಗಾರಿಕೆಯನ್ನು ಕಡಿಮೆ ಮಾಡಲು ಹಾಗೂ ಸಂಸ್ಥೆಗಳನ್ನು ಆರ್ಥಿಕ ವಾಗಿ ಸದೃಢಗೊಳಿಸಲು (ಇ) ಪ್ರಶ್ನೆಯಲ್ಲಿ ಉತ್ತರಿಸಿರುವಂತೆ ಸರ್ಕಾರದಿಂದ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಹಾಗೂ ಮೋಟಾರು ವಾಹನ ತೆರಿಗೆ ಪಾವತಿಯಿಂದ ಸಹ ವಿನಾಯಿತಿ ನೀಡಲಾಗಿದೆ. |

ಸಂಖ್ಯೆ: ಟಿಡಿ 5 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ ಅ

ಶಕ್ತಿ ಯೋಜನೆಯಡಿ ಫಲಾನುಭವಿಗಳ ಸಂಖ್ಯೆ, ಬಿಡುಗಡೆ ಕೋರಲಾದ ಮೊತ್ತ, ಸರ್ಕಾರದಿಂದ ಬಿಡುಗಡೆಗೊಳಿಸಿದ ಅನುದಾನ ಮತ್ತು ಕೊರತೆ ಮೊತ್ತದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. (ಜೂನ್-2023 ರಿಂದ ಡಿಸೆಂಬರ್-2025 ವರೆಗೆ)

(ರೂ.ಕೋಟಿಗಳಲ್ಲಿ)

| ಸಂಸ್ಥೆ/ನಿಗಮ | ವರ್ಷ | ಫಲಾನುಭವಿಗಳ ಸಂಖ್ಯೆ (ಕೋಟಿಗಳಲ್ಲಿ) | ಪ್ರಯಾಣದ ವೆಚ್ಚ | ಬಿಡುಗಡೆ ಮೊತ್ತ | ಬಾಕಿ ಮೊತ್ತ |
|---|---|---|---|---|---|
| ಕ.ರಾ.ರ.ಸಾ.ನಿಗಮ | 2023-2024 | 56.27 | 1664.42 | 1211.80 | 452.62 |
| | 2024-2025 | 75.98 | 2401.00 | 1905.20 | 495.80 |
| | 2025-2026 | 63.28 | 2240.35 | 1538.04 | 702.31 |
| ಬೆಂ.ಮ.ಸಾ.ಸಂಸ್ಥೆ | 2023-2024 | 57.84 | 755.10 | 549.67 | 205.43 |
| | 2024-2025 | 77.27 | 1059.37 | 864.59 | 194.78 |
| | 2025-2026 | 66.99 | 1042.20 | 681.69 | 360.51 |
| ವಾ.ಕ.ರ.ಸಾ.ಸಂಸ್ಥೆ | 2023-2024 | 42.14 | 1076.13 | 792.22 | 283.91 |
| | 2024-2025 | 56.69 | 1507.74 | 1232.18 | 275.55 |
| | 2025-2026 | 49.76 | 1454.31 | 970.41 | 483.90 |
| ಕ.ಕ.ರ.ಸಾ.ನಿಗಮ | 2023-2024 | 26.81 | 884.72 | 646.06 | 238.66 |
| | 2024-2025 | 34.71 | 1217.35 | 1013.03 | 204.32 |
| | 2025-2026 | 28.08 | 1108.36 | 785.53 | 322.83 |
| ಒಟ್ಟಾರೆ ನಾಲ್ಕು ನಿಗಮ / ಸಂಸ್ಥೆ | 2023-2024 | 183.07 | 4380.37 | 3199.75 | 1180.62 |
| | 2024-2025 | 244.65 | 6185.46 | 5015.00 | 1170.46 |
| | 2025-2026 | 208.11 | 5845.22 | 3975.67 | 1869.56 |
| **ಒಟ್ಟಾರೆ** | | **635.83** | **16411.05** | **12190.42** | **4220.63** |

ಅನುಬಂಧ-ಆ

## ನಾಲ್ಕು ನಿಗಮಗಳ ಬಾಕಿ ಮತ್ತು ಹೊಣೆಗಾರಿಕೆ ವಿವರಗಳು

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 186.64 | 326.73 | 516.78 | 701.74 | 1028.99 | 1230.36 | 2344.89 | 3069.42 | 2000.37 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 122.84 | 182.75 | 271.93 | 301.78 | 410.49 | 325.10 | 223.67 | 267.45 | 351.95 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 224.05 | 224.05 | | |
| 4 | ಸಿಬ್ಬಂದಿಗಳ ಬಾಕಿ ಪಾವತಿ | 238.13 | 263.59 | 351.81 | 486.33 | 730.46 | 385.96 | 376.16 | 257.02 | 379.10 |
| 5 | ಇಂಧನ ಬಾಕಿ ಪಾವತಿ | 281.06 | 295.93 | 348.90 | 542.66 | 730.05 | 111.02 | 439.75 | 905.61 | 930.88 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 482.16 | 412.74 | 577.37 | 435.45 | 485.33 | 769.83 | 790.76 | 777.71 | 699.57 |
| I | ಒಟ್ಟು | **1310.83** | **1481.74** | **2066.79** | **2467.96** | **3385.32** | **3046.32** | **4399.28** | **5277.21** | **4361.87** |
| II | ಸಾಲದ ಬಾಕಿ ಹೊಣೆಗಾರಿಕೆ | 1301.89 | 1171.93 | 1277.29 | 1389.98 | 1365.96 | 1053.06 | 863.90 | 1045.09 | 2,647.88 |
| I+II | ಒಟ್ಟು (I+II) | **2612.72** | **2653.67** | **3344.08** | **3857.94** | **4751.28** | **4099.38** | **5263.18** | **6322.30** | **7009.75** |

18

Chief Accounts Officer-FA
KSRTC, Central Office 9/12
Bangalore

File No. TD/223/TCQ/2025-Sec 1-Trans (Computer No. 1984682)
Generated from eOffice by Ravi Gothe, TD-TD1-JA1(CBG), JUNIOR ASSISTANT, TRANSPORT [illegible]

ಬಾಕಿ ಮತ್ತು ಹೊಣೆಗಾರಿಕೆ ವಿವರಗಳು – ಕರಾರಸಾನಿ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.05.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | - | - | 48.70 | 230.44 | 455.49 | 583.24 | 820.86 | 880.53 | 424.61 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 12.61 | 18.27 | 24.48 | 63.54 | 68.44 | 48.03 | 18.86 | 51.60 | 67.20 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 86.55 | 86.55 | | - |
| 4 | ಸಿಬ್ಬಂದಿಗಳ ಬಾಕಿ ಪಾವತಿ | - | - | 5.50 | 8.50 | 97.73 | 69.48 | 56.38 | 11.50 | 68.21 |
| 5 | ಇಂಧನ ಬಾಕಿ ಪಾವತಿ | 117.03 | 121.31 | 166.99 | 302.55 | 379.92 | 35.41 | 169.00 | 268.66 | 263.75 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 181.28 | 82.42 | 134.06 | 143.07 | 163.31 | 180.32 | 119.05 | 124.12 | 117.24 |
| I | ಒಟ್ಟು | **305.92** | **222.00** | **379.73** | **748.10** | **1,164.89** | **1,003.03** | **1,270.70** | **1,336.41** | **941.01** |
| II | ಸಾಲದ ಬಾಕಿ ಹೊಣೆಗಾರಿಕೆ | 282.38 | 252.23 | 260.54 | 353.20 | 265.55 | 208.15 | 179.14 | 256.15 | 806.23 |
| I+II | ಒಟ್ಟು (I+II) | **588.30** | **474.23** | **640.27** | **1,101.30** | **1,430.44** | **1,211.18** | **1,449.84** | **1,592.56** | **1,747.24** |

Chief Accounts Officer-FA
KSRTC, Central Office
Bangalore
9/12

File No. TD/223/TCQ/2025-Sec 1-Trans (Computer No. 1984682)
Generated from eOffice by Ravi Gothe, TD-TD1-JA1/C(RG), JUNIOR ASSISTANT, TRANSPORTSEC on 23/01/2026 02:53 PM
19

## ಬಾಕಿ ಮತ್ತು ಹೊಣೆಗಾರಿಕೆ ವಿವರಗಳು – ಬೆಮಸಾಸಂಸ್ಥೆ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 96.58 | 213.60 | 362.90 | 215.20 | 146.07 | 81.12 | 485.49 | 943.58 | 868.64 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 66.98 | 66.00 | 121.19 | 86.36 | 90.06 | 9.79 | 99.94 | 163.90 | 192.74 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 50.25 | 50.25 | | - |
| 4 | ಸಿಬ್ಬಂದಿಗಳ ಬಾಕಿ ಪಾವತಿ | 135.76 | 140.06 | 198.09 | 273.48 | 362.54 | 175.87 | 187.13 | 185.90 | 197.55 |
| 5 | ಇಂಧನ ಬಾಕಿ ಪಾವತಿ | 57.26 | 54.25 | 51.26 | 85.73 | 70.21 | 31.81 | 119.34 | 429.55 | 386.58 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 246.67 | 282.32 | 375.01 | 221.71 | 214.50 | 442.03 | 359.50 | 356.96 | 463.48 |
| I | ಒಟ್ಟು | 603.25 | 756.23 | 1,108.45 | 882.48 | 883.38 | 790.87 | 1,301.65 | 2,079.89 | 2,108.99 |
| II | ಸಾಲದ ಬಾಕಿ ಹೊಣೆಗಾರಿಕೆ | 800.32 | 650.70 | 672.63 | 679.20 | 764.95 | 592.99 | 369.07 | 560.16 | 915.08 |
| I+II | ಒಟ್ಟು (I+II) | 1,403.57 | 1,406.93 | 1,781.08 | 1,561.68 | 1,648.33 | 1,383.86 | 1,670.72 | 2,640.05 | 3,024.07 |

Chief Accounts Officer-FA
KSRTC, Central Office
Bangalore 9/12

## ಬಾಕಿ ಮತ್ತು ಹೊಣೆಗಾರಿಕೆ ವಿವರಗಳು -ವಾಕರಸಾಸಂಸ್ಥೆ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 76.53 | 97.76 | 94.42 | 239.52 | 407.61 | 547.89 | 866.14 | 1,149.20 | 681.12 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 24.23 | 90.29 | 115.48 | 140.22 | 234.69 | 256.28 | 75.92 | 25.90 | 62.48 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | | | | | | 51.50 | 51.50 | | |
| 4 | ಸಿಬ್ಬಂದಿಗಳ ಬಾಕಿ ಪಾವತಿ | 69.90 | 93.01 | 111.58 | 166.72 | 726.83 | 107.36 | 77.20 | 18.62 | 65.09 |
| 5 | ಇಂಧನ ಬಾಕಿ ಪಾವತಿ | 56.70 | 61.75 | 73.67 | 75.16 | 164.08 | 19.17 | 74.41 | 86.40 | 161.30 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 43.00 | 33.33 | 39.13 | 51.52 | 68.01 | 101.67 | 90.22 | 80.17 | 77.03 |
| I | ಒಟ್ಟು | **270.36** | **376.14** | **434.28** | **672.64** | **1,101.22** | **1,083.87** | **1,235.39** | **1,360.29** | 1,047.02 |
| II | ಸಾಲದ ಬಾಕಿ ಹೊಣೆಗಾರಿಕೆ | 148.31 | 133.54 | 250.93 | 280.71 | 229.13 | 169.14 | 111.29 | 72.28 | 656.50 |
| I+II | ಒಟ್ಟು (I+II) | **418.67** | **509.68** | **685.21** | **953.35** | **1,330.35** | **1,253.01** | **1,346.68** | **1,432.57** | 1,703.52 |

Chief Accounts Officer-FA
KSRTC, Central Office
Bangalore
9/12

No. TD/223/TCQ/2025-Sec 1-Trans (Computer No. 1984682)
nerated from eOffice by Ravi Gothe TD-TD1-JA1/C(RG) JUNIOR ASSISTANT TRANSPORT...

## ಬಾಕಿ ಮತ್ತು ಹೊಣೆಗಾರಿಕೆ ವಿವರಗಳು –ಕಕರಸಾಸಂಸ್ಥೆ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 31.03.2018 | 31.03.2019 | 31.03.2020 | 31.03.2021 | 31.03.2022 | 31.03.2023 | 31.03.2024 | 31.03.2025 | 30.11.2025 |
|---|---|---|---|---|---|---|---|---|---|---|
| 1 | ಭವಿಷ್ಯ ನಿಧಿ ನ್ಯಾಸ ಮಂಡಳಿ | 13.53 | 15.37 | 10.76 | 16.58 | 19.82 | 18.11 | 172.40 | 96.11 | 26.00 |
| 2 | ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಬಾಕಿ | 19.02 | 8.19 | 10.78 | 11.66 | 17.30 | 11.00 | 28.95 | 26.05 | 29.53 |
| 3 | ದಿನಾಂಕ 01.01.2020 ರಿಂದ 28.02.2023ರವರೆಗಿನ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಉಪಧನ ಮತ್ತು ರಜೆ ನಗದೀಕರಣದ ಬಾಕಿ | 0.00 | 0.00 | 0.00 | 0.00 | 0.00 | 35.75 | 35.75 | | - |
| 4 | ಸಿಬ್ಬಂದಿಗಳ ಬಾಕಿ ಪಾವತಿ | 32.47 | 30.52 | 36.64 | 38.13 | 43.36 | 33.25 | 55.45 | 41.00 | 48.25 |
| 5 | ಇಂಧನ ಬಾಕಿ ಪಾವತಿ | 55.07 | 58.62 | 56.98 | 79.22 | 115.84 | 24.63 | 77.00 | 121.00 | 119.25 |
| 6 | ಸರಬರಾಜುದಾರರ ಬಿಲ್ ಪಾವತಿ ಹಾಗೂ ಇತರೆ ಬಿಲ್ಲುಗಳು | 11.21 | 14.67 | 29.17 | 19.15 | 39.51 | 45.81 | 221.99 | 216.46 | 41.82 |
| I | ಒಟ್ಟು | **131.30** | **127.37** | **144.33** | **164.74** | **235.83** | **168.55** | **591.54** | **500.62** | **264.85** |
| II | ಸಾಲದ ಬಾಕಿ ಹೊಣೆಗಾರಿಕೆ | 70.88 | 135.46 | 93.19 | 76.87 | 106.33 | 82.78 | 204.40 | 156.50 | 270.07 |
| I+II | **ಒಟ್ಟು (I+II)** | **202.18** | **262.83** | **237.52** | **241.61** | **342.16** | **251.33** | **795.94** | **657.12** | **534.92** |



Chief Accounts Officer-EA
KSRTC, Central Office
Bangalore

File No. TD/223/TCQ/2025-Sec 1-Trans (Computer No. 1984682)
Generated from eOffice by Ravi Gothe, TD-TD1-JA(C/BC), JUNIOR ASSISTANT, TRANSPORT...